ಹಂತದಲ್ಲಿ ಇರುವುದೆಷ್ಟು; ಖಾಸಗಿ ಕಟ್ಟಡದಲ್ಲಿದ್ದು ಖಾಯಂ ಕಟ್ಟಡದ ಅವಶ್ಯಕತೆ ಇರುವ ಕೇಂದ್ರಗಳು ಎಷ್ಟು?

ಇ) ಖಾಯಂ ಕಟ್ಟಡ ಕಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು.

ಈ) ಮೆಡಿಕಲ್ ಕ್ಲಿನಿಕ್‌ಗಳ ಮಾದರಿಯಲ್ಲಿ ಪಶುವೈದ್ಯಕೀಯ ಕ್ಲಿನಿಕ್ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯ ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು

೩೨೦೧ ೧೩ ೫

ಆ)

	ಮೈಸೂರು ಜಿಲ್ಲೆ	ಮೈಸೂರು ತಾಲ್ಲೂಕು
ಖಾಯಂ ಪಶು ಆಸ್ಪತ್ರೆ ಕಟ್ಟಡಗಳು	೧೧	೩
ಖಾಸಗಿ ಕಟ್ಟಡ	೨	೨
ಖಾಯಂ ಕಟ್ಟಡದ ಅವಶ್ಯಕತೆ	೨	೨
ನಿರ್ಮಾಣ ಹಂತದಲ್ಲಿ	೧	೧

ಇ) ಪರಿಶೀಲನೆಯಲ್ಲಿದೆ.

ಈ) ಹೌದು

ರಾಜ್ಯದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅನುಷ್ಠಾನಗೊಳಿಸಲು ಮಾಡಿರುವ ವೆಚ್ಚದ ಬಗ್ಗೆ.

೨೧೧೩.(೨೬೮೭)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷ ಅವಧಿಯಲ್ಲಿ ರಾಜ್ಯದಲ್ಲಿ ಕನ್ನಡವನ್ನು ಆಡಳಿತ

ಭಾಷೆಯಾಗಿ ಅನುಷ್ಠಾನಗೊಳಿಸಲು ಹಾಗೂ ಸಂಸ್ಕೃತಿ ಪ್ರಚಾರಕ್ಕಾಗಿ ಮಾಡಿರುವ ವೆಚ್ಚವೆಷ್ಟು?

ಆ) ಅನ್ಯ ರಾಜ್ಯಗಳಲ್ಲಿರುವಂತೆ ಕನ್ನಡ ಸಂಸ್ಕೃತಿ ಭಾಷೆ ಪ್ರಸಾರಕ್ಕೆ ಕೈಗೊಂಡಿರುವ ಕಾರ್ಯಕ್ರಮಗಳೇನು? ಯಾವ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ?

ಇ) ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಳೆದ ಒಂದು ವರ್ಷದ ಅವಧಿಯಲ್ಲಿ ಮಾಡಿರುವ ವೆಚ್ಚವೆಷ್ಟು? ಇದರ ಮೂಲ ಉದ್ದೇಶವೇನು?

ಈ) ಪ್ರಾಧಿಕಾರವು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟಕ್ಕೆ ತಲುಪಲು ಯಾವ ಕ್ರಮ ಕೈಗೊಂಡಿದೆ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ)

	ರೂ. ಲಕ್ಷಗಳಲ್ಲಿ
೧. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ	೧೭೮೨ ಲಕ್ಷ
೨. ಕನ್ನಡ ಅಭಿವೃದ್ಧಿ ಪ್ರಾಧಿಕಾರ	೧೧.೭೩ ಲಕ್ಷ
ಒಟ್ಟು ರೂ	೧೮೦.೦೨ಲಕ್ಷ

ಆ) ೧. ಅನುಬಂಧದಲ್ಲಿ ವಿವರ ನೀಡಿ ಲಗತ್ತಿಸಿದೆ.

೨. ಹೊಸ ಕಾರ್ಯಕ್ರಮಗಳು:

ಅ. ದೂರದರ್ಶನದಲ್ಲಿ 'ಕನ್ನಡ-ಕನ್ನಡಿ' ಕನ್ನಡ ಕಲಿಕೆ ಶಿಕ್ಷಣ ಪ್ರಸಾರ

ಆ. ಆಕಾಶವಾಣಿಯಲ್ಲಿ ಕನ್ನಡ ಬಾರದವರಿಗೆ ಕನ್ನಡ ಕಲಿಕೆ ಪ್ರಸಾರ ಕಾರ್ಯಕ್ರಮ

೩. ಕರ್ನಾಟಕದಲ್ಲಿನಭಾಷೆ:ಸಂಸ್ಕೃತಿಯ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಕೆಳಕಂಡ ಹೊಸ ಯೋಜನೆಗಳನ್ನು ಹಮ್ಮಿಕೊಂಡಿದೆ.

೪. ಆಡಳಿತದ ಭಾಷೆಯಾಗಿ ಕನ್ನಡದ ಅನುಷ್ಠಾನ.

೫. ಡಾ:ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳ ಅನುಷ್ಠಾನದ ಬಗ್ಗೆ

೬. ಕನ್ನಡೀಕರಣ ಕ್ರಿಯಾ ಯೋಜನೆ.

೭. ಪ್ರಕಟಣೆಗಳು

೮. ಆಕರ ಸಾಹಿತ್ಯ ಯೋಜನೆ

೯. ಕನ್ನಡ ಜಾಗೃತಿ ಜಾಥಾ.

ಇ) ಯೋಜನೆಯಡಿಯಲ್ಲಿ ಕನ್ನಡ ಅಭಿವೃದ್ಧಿ ಮುಂದುವರೆದ ಕಾರ್ಯಕ್ರಮಗಳಿಗೆ ಅಂದಾಜು ೧.೭೩ ಲಕ್ಷರೂ.ಗಳನ್ನು ವೆಚ್ಚ ಮಾಡಿದೆ ಮತ್ತು ಯೋಜನೇತರಡಿಯಲ್ಲಿ ಆಡಳಿತಾತ್ಮಕ ವೆಚ್ಚಗಳಿಗೆ ೨೨.೦೦ಲಕ್ಷ ವೆಚ್ಚ ಮಾಡಿದೆ.

೨. ಆಡಳಿತದಲ್ಲಿ ಸಂಪೂರ್ಣ ಕನ್ನಡವನ್ನು ಅನುಷ್ಠಾನಮಾಡುತ್ತಿರುವ ಬೇರೆ ಬೇರೆ ಇಲಾಖೆಗಳು ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸುವುದು. ಡಾ:ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.

ಈ) ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವಲ್ಲಿ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವುದು ಅಲ್ಲದೆ ಪ್ರಾಧಿಕಾರದ ಅಧಿನಿಯಮದಂತೆ ಇತರೆ ಪ್ರಕಾರ್ಯಗಳು ಪ್ರಾಧಿಕಾರವು ಸ್ಥಳೀಯ ಜಾಗೃತಿ ಸಭೆಗಳನ್ನು ನಡೆಸಿದೆ. ತಾಲ್ಲೂಕು ಮಟ್ಟದ ಕನ್ನಡ ಸಂಘ ಸಂಸ್ಥೆಗಳ ಸಂಗಡ ನಿರಂತರ ಸಂಪರ್ಕದ ಮೂಲಕ ಪ್ರಾಧಿಕಾರದ ಆಶಯಗಳನ್ನು ಗ್ರಾಮಗಳ ಮಟ್ಟಕ್ಕೆ ತರಲಾಗುತ್ತಿದೆ.

ಅನುಬಂಧ

೧. ಕನ್ನಡ ಭಾಷೆ ಪ್ರಚಾರಕ್ಕೆ ಅನ್ಯ ಭಾಷಿಕರಿಗೆ ಕನ್ನಡ ಕಲಿಕೆ ತರಬೇತಿ ನೀಡಲಾಗುತ್ತಿದೆ.

೨. ಆಡಳಿತದಲ್ಲಿ ಕನ್ನಡ ಬಳಕೆಗೆ ಅನುಕೂಲವಾಗುವಂತೆ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ.

೩. ಕಾರ್ಖಾನೆ ಸಿಬ್ಬಂದಿ, ಮಹಾಲೇಖಪಾಲರ ಕಛೇರಿ ಸಿಬ್ಬಂದಿ ಬ್ಯಾಂಕ್ ಸಿಬ್ಬಂದಿ ಇವರಿಗೆ ಆಡಳಿತದಲ್ಲಿ ಕನ್ನಡ ಶಿಬಿರ ನಡೆಸಲಾಗುತ್ತಿದೆ.

೪. ಅಂಚೆ ಮೂಲಕ ಕನ್ನಡೇತರರಿಗೆ ಕನ್ನಡ ಕಲಿಕೆ ಕಾರ್ಯಕ್ರಮ ನಡೆಸಲಾಗುತ್ತಿದೆ.

೫. ದೂರದರ್ಶನದ ಮೂಲಕ ಕನ್ನಡ-ಕನ್ನಡಿ ಧಾರವಾಹಿಗಳ ಮುಖಾಂತರ ಕನ್ನಡ ಕಲಿಕೆ ಕಾರ್ಯಕ್ರಮ ನಡೆಸಲಾಗುತ್ತಿದೆ.

೬. ಆಕಾಶವಾಣಿ ಮುಖಾಂತರ ಕನ್ನಡ ಕಲಿಕೆ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುತ್ತಿದೆ.

೭. ಎಲ್ಲಾ ಜಿಲ್ಲೆಗಳಲ್ಲಿಯೂ ಸಂಸ್ಕೃತಿ ಪ್ರಸಾರಕ್ಕಾಗಿ ಸ್ಥಳೀಯ ಕಾರ್ಯಕ್ರಮಗಳಲ್ಲದೆ, ಸಾಂಸ್ಕೃತಿಕ ಸೌರಭ ಹಾಗೂ ಚಿಗುರು, ಕಾವ್ಯ ಕಾವೇರಿ ದರ್ಶನ ಗ್ರಾಮೀಣ ಸಂಸ್ಕೃತಿ, ರಂಗಸುಗ್ಗಿ ಯೋಜನೆಗಳನ್ನು ಜಾರಿಗೆ ತಂದಿದೆ.